ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-1 Issue 3, Nov-Dec 2019, 26-30**
**©*IIMRD*, Mysuru**
IIMRD JOURNALS
**www.iimrd.com**

# ಇರುಳಿಗ ಬುಡಕಟ್ಟು ಸಮುದಾಯದ ವಿವಾಹ ಪದ್ಧತಿ

**ದಿನೇಶ ಕೆ.ಡಿ.[1] ಮತ್ತು ಡಾ.ಹೆಚ್.ಎಂ. ಮರಳು ಸಿದ್ದಯ್ಯ[2]**

**ಪೀಠಿಕೆ**

ಕರ್ನಾಟಕ ರಾಜ್ಯದಲ್ಲಿರುವ ಬುಡಕಟ್ಟು ಸಮುದಾಯಗಳಲ್ಲಿ ಇರುಳಿಗ ಬುಡಕಟ್ಟು ಸಮುದಾಯ ಪ್ರಮುಖವಾಗಿದೆ. ಇವರು ರಾಮನಗರ ಜಿಲ್ಲೆಯ ರಾಮನಗರ, ಕನಕಪುರ, ಮಾಗಡಿ, ಚನ್ನಪಟ್ಟಣ ತಾಲೂಕುಗಳಲ್ಲಿ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್ ತಾಲೂಕು ಹಾಗೂ ಇನ್ನಿತರ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಇರುಳಿಗರು ಬೆಟ್ಟಗುಡ್ಡ ಮತ್ತು ಅರಣ್ಯ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಇರುಳಿಗರನ್ನು ಇರುಳಿಗ, ಇರುಳರು, ಇರಳರ್, ಇಲ್ಲಿಗರು, ಪೂಜಾರಿ, ಕಾಡುಪೂಜಾರಿಗಳು, ಅರಣ್ಯ ಆರಾಧಕರು ಎಂದು ಸಹ ಕರೆಯುತ್ತಾರೆ. ಇವರು ಕರ್ನಾಟಕವಲ್ಲದೆ ನೆರೆಯ ರಾಜ್ಯಗಳಾದ ಕೇರಳ ಮತ್ತು ತಮಿಳುನಾಡಿನಲ್ಲಿಯೂ ಕಂಡು ಬರುತ್ತಾರೆ. 2011ರ ಜನಗಣತಿಯ ಪ್ರಕಾರ ಇವರ ಜನಸಂಖ್ಯೆ 10,259 ರಷ್ಟಿದ್ದು, ಇವರಲ್ಲಿ ಪುರಷರ ಪ್ರಮಾಣ 5,267 ಮತ್ತು ಸ್ತ್ರೀಯರ ಪ್ರಮಾಣ 4,992 ರಷ್ಟಿದೆ.

ಪ್ರಸ್ತುತ ಲೇಖನದಲ್ಲಿ ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ನೆಲೆಸಿರುವ ಇರುಳಿಗರ ವಿವಾಹ ಪದ್ಧತಿಯನ್ನು ವಿವರಿಸಲಾಗಿದೆ. ಯಾವುದೇ ಸಮುದಾಯದಲ್ಲಿ ವಿವಾಹ ಮತ್ತು ಕುಟುಂಬವು ಪ್ರಮುಖವಾದ ಸಾಮಾಜಿಕ ಸಂಸ್ಥೆಯಾಗಿದ್ದು, ಆದಿ ಕಾಲದಿಂದಲೂ ಬುಡಕಟ್ಟು ಸಮುದಾಯಗಳಲ್ಲಿಯೂ ಕೂಡ ವಿವಾಹ ಪದ್ಧತಿ ಅಸ್ಥಿತ್ವದಲ್ಲಿದೆ. ಇರುಳಿಗರಲ್ಲಿ ಹಿಂದಿನ ಕಾಲದಲ್ಲಿ ಮದುವೆಯೆಂಬುದು ಯಾವುದೇ ಶಾಸ್ತ್ರಗಳಿಲ್ಲದೆ ನಡೆಯುತ್ತಿತ್ತು. ಹುಡುಗ ಹುಡುಗಿಯನ್ನು ಮೆಚ್ಚಿ ಸಮುದಾಯದ ಹಿರಿಯರಿಗೆ ತಿಳಿಸುತ್ತಿದ್ದ. ಹಿರಿಯರ ಸಮ್ಮುಖದಲ್ಲಿ ಕೈ ಹಿಡಿದು ಮರವೊಂದನ್ನು ಪ್ರದಕ್ಷಿಣೆ ಹಾಕಿ ಕೈ ಮುಗಿದರೆ ಅವರ ವಿವಾಹ ಮುಗಿಯುತ್ತಿತ್ತು. ಇನ್ನೂ ಕೆಲವೆಡೆ ಮೆಚ್ಚಿದ ಹೆಣ್ಣು–ಗಂಡುಗಳು ಕಾಡಿನೊಳಕ್ಕೆ ಓಡಿ ಹೋಗಿ ಗುಹೆ ಅಥವಾ ಮರದ ಪೊಟರೆಯಲ್ಲಿ ವಾಸಿಸುತ್ತಿದ್ದು ಹಲವಾರು ದಿನಗಳು, ತಿಂಗಳು ಅಥವಾ ವರ್ಷವನ್ನೆ ಕಳೆದು ಕೆಲವೊಮ್ಮೆ ಮಕ್ಕಳನ್ನು ಎತ್ತಿಕೊಂಡು ಬರುತ್ತಿದ್ದರು. ಇಂತಹ ಮದುವೆಗಳು ಇರುಳಿಗರಲ್ಲಿ ಇತ್ತೀಚಿನವರೆಗೂ ಸಾಮಾನ್ಯವಾಗಿತ್ತು.

ಕಾಡಿಗೆ ಓಡಿ ಹೋಗಿ ಹಿಂದುರಿಗಿ ಬಂದ ಹುಡುಗ ಹುಡುಗಿ ಅಥವಾ ಗಂಡ–ಹೆಂಡತಿಯರನ್ನು ಬುಡಕಟ್ಟಿನಲ್ಲಿರುವ ಪ್ರಮುಖವಾದ ನ್ಯಾಯವಾದಿಗಳಾದ ಕುಲದಲ್ಲಿರುವ ನಾಡಗೌಡ, ಕುಲದಗೌಡ, ಕಟ್ಟುಗೌಡ, ಗಡಿಗೌಡ ಕೋಲಕಾರ ಕೂಡಿ ಇಬ್ಬರನ್ನು ವಿಚಾರಿಸಿ, ಒಬ್ಬರಿಗೊಬ್ಬರು ಇಷ್ಟಪಟ್ಟಿರುವ ಬಗ್ಗೆ ಖಾತರಿ ಪಡಿಸಿಕೊಂಡು ಮುಂದೆ ಅವರಿಬ್ಬರು ಬಾಳುವೆ ಮಾಡುಲು ಅನುಮತಿಸುತ್ತಿದ್ದರು. ಆದರೆ

---

[1] *ಸಂಶೋಧನಾ ವಿದ್ಯಾರ್ಥಿ, ಮಾನವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.*

[2] *ಮಾರ್ಗದರ್ಶಕರು, ಮಾನವ ಭವನ, ಬೋಗಾದಿ ಮೈಸೂರು.*

ಇತ್ತೀಚಿನ ದಿನಗಳಲ್ಲಿ ಅವರ ವೈವಾಹಿಕ ಪದ್ಧತಿಯು ಕೂಡ ಬದಲಾಗಿರುವುದನ್ನು ಕಾಣಬಹುದಾಗಿದೆ. ಆದರೆ ಇತರೆ ಸಮುದಾಯಗಳಿಗೆ ಹೋಲಿಸಿದಾಗ ಇವರ ವಿವಾಹ ಪದ್ಧತಿಯಲ್ಲಿ ಇಂದಿಗೂ ಕೂಡ ವಿಶಿಷ್ಟತೆಯನ್ನು ಕಾಣಬಹುದಾಗಿದೆ.

**ಹೆಣ್ಣು ನೋಡುವುದು**

ಸಾಮಾನ್ಯವಾಗಿ ರಾತ್ರಿಯ ಹೊತ್ತು ಇರುಳಿಗರು ಹೆಣ್ಣು ನೋಡಲು ಹೋಗುವುದು ವಾಡಿಕೆಯಾಗಿತ್ತು. ಹೆಣ್ಣು ನೋಡಲು ಹೋಗುವ ಹಿಂದಿನ ರಾತ್ರಿ ಕಾಡಿಗೆ ಹೋಗಿ ಉಗುನಿ ಹಂಬಿನ ಕುಡಿಯನ್ನು ಚಿವುಟಿ ಅದಕ್ಕೆ ಅರಿಶಿನ ಕುಂಕುಮ ಹಚ್ಚಿ ಅದರ ತುದಿಗೆ ಒಂದು ಬಿಳಿ ಬಟ್ಟೆಯನ್ನು ಭದ್ರವಾಗಿ ಕಟ್ಟಿ ಬರುತ್ತಾರೆ. ಮಾರನೇ ದಿನ ಹೋಗುವಾಗ ಆ ಉಗುನಿ ಹಂಬಿನ ಕುಡಿಯನ್ನು ನೋಡುತ್ತಾರೆ. ಕುಡಿಯು ಚಿಗುರಿದ್ದರೆ ಸಂಬಂಧ ಬೆಳೆಸಬಹುದು ಎಂದು ಅಥವಾ ಕುಡಿ ಒಣಗಿ ಹೋಗಿದ್ದರೆ ಆ ಸಂಬಂಧ ಕೂಡಿ ಬರುವುದಿಲ್ಲವೆಂದು ತೀರ್ಮಾನಿಸುತ್ತಾರೆ. ಹೀಗೆ ಹೆಣ್ಣನ್ನು ನೋಡಲು ಹೊರಟಾಗ ಜೊತೆಯಲ್ಲಿ ಸುಟ್ಟ ರಾಗಿ ರೊಟ್ಟಿಯನ್ನು ಕಟ್ಟಿಕೊಂಡು ಸಂಜೆಯ ತಂಪಿನಲ್ಲಿ ಹೊರಡುತ್ತಾರೆ. ಮಧ್ಯ ದಾರಿಯಲ್ಲಿ ರೊಟ್ಟಿ ತಿಂದು ನೀರು ಕುಡಿದು ಹೆಣ್ಣಿನ ಊರು ತಲುಪುತ್ತಾರೆ. ನಂತರ ಹೆಣ್ಣಿನ ಮನೆಗೆ ಹೋಗಿ 'ನಿಮ್ಮ ಮನೆಯಲ್ಲಿ ಮದುವೆಗೆ ಬಂದ ಹುಡುಗಿಯೊಂದಿದೆ ಎಂದು ತಿಳಿದು ಬಂದದ್ದರಿಂದ ನಿಮ್ಮ ಮನೆಗೆ ಬಂದಿದ್ದೇವೆ' ಎನ್ನುತ್ತಾರೆ. ಅಂದು ರಾತ್ರಿ ಏನನ್ನು ತಿನ್ನದೆ ಬರೀ ನೀರು ಮಾತ್ರ ಕುಡಿದು ಅಲ್ಲಿಯೇ ಉಳಿದು ಕೊಳ್ಳುತ್ತಿದ್ದರು. ಮರುದಿನ ಹುಡುಗಿಯು ಒಪ್ಪಿಗೆಯಾದರೆ ಹುಡುಗಿಯ ಮನೆಯಲ್ಲಿ ಊಟ ಮಾಡಿ ಹುಡುಗನನ್ನು ಕಳುಹಿಸುತ್ತೇವೆ ಎಂದು ಹೇಳಿ ಹೊರಡುತ್ತಾರೆ. ನಂತರ ವಿವಾಹದ ದಿನವೊಂದನ್ನು ಗುರುತಿಸಿ ವಿವಾಹ ಮಾಡುತ್ತಾರೆ.

**ಧಾರಾ ಮುಹೂರ್ತ**

ವಿವಾಹದ ದಿನ ಹೆಣ್ಣು ಮತ್ತು ಗಂಡನ್ನು ದಿಬ್ಬಣ ಕರೆದುಕೊಂಡು ಬರುತ್ತಾರೆ. ಬಂದ ಹೆಣ್ಣು ಗಂಡುಗಳನ್ನು ಬೇರೆ ಬೇರೆಯೇ ಬಿಟ್ಟು ಮೊದಲು ಹೆಣ್ಣು ನಂತರ ಗಂಡನ್ನು ಧಾರೆ ಮಂಟಪದ ಹಸೆಮಣೆಗೆ ಕರೆತರುತ್ತಾರೆ. ನಂತರ ವಧು ಮತ್ತು ವರರಿಗೆ ಮೊದಲು ಹೆಣ್ಣಿನ ತಂದೆ ತಾಯಿಯರು ಧಾರೆ ಎರೆಯುತ್ತಾರೆ. ನಂತರ ಗಂಡಿನ ತಂದೆ ತಾಯಿಯರು ಬಂದಿರುವ ನೆಂಟರಿಷ್ಟರು ಎಲ್ಲರೂ ಧಾರೆ ಎರೆಯುತ್ತಾರೆ. ಎಲ್ಲಾ ಸಂಬಂಧಿಕರು ಹಿರಿಯರೂ ಧಾರೆ ಎರೆದಾದ ಮೇಲೆ 'ತಾಳಿ ಕಟ್ಟುವ ಶಾಸ್ತ್ರ' ನಡೆಯುತ್ತದೆ.

**ತಣಿಗೆ ಶಾಸ್ತ್ರ**

ಧಾರೆಶಾಸ್ತ್ರ ಮುಗಿದ ಬಳಿಕ ಹಿತ್ತಾಳೆ ಅಥವಾ ಕಂಚಿನ ತಟ್ಟೆಯೊಂದರ ಹಿಂದಕ್ಕೆ ವೀಳ್ಯದೆಲೆಯೊಂದನ್ನು ಅಂಟಿಸಿರುತ್ತಾರೆ. ಇದನ್ನು ಮೂರು ಜನ ಮುತ್ತೈದೆಯರು ತಮ್ಮ ಕೈಯಲ್ಲಿಡಿದು ಕುಳಿತಿರುವ ಗಂಡು ಮತ್ತು ಹೆಣ್ಣುಗಳ ತಲೆಯ ಮೇಲೆ ಎಡದಿಂದ ಬಲಕ್ಕೆ ಸುತ್ತುತ್ತಾರೆ. ಅವರು ಸುತ್ತಿದ್ದಷ್ಟು

ಸುತ್ತು ದಾರವನ್ನು ಮೂರು ಜನ ಮುತ್ತೈದೆಯರಿಗೂ ಸೇರಿಸಿ ಸುತ್ತುತ್ತಾರೆ. ಹೀಗೆ ಮೂರು ತಂಡಗಳು ಮೂರು ಸಾರಿ ಮಾಡುವುದನ್ನು ತಣಿಗೆ ಶಾಸ್ತ್ರ ಎಂದು ಕರೆಯುತ್ತಾರೆ.

**ವೀಳ್ಯಶಾಸ್ತ್ರ**

ಇರುಳಿಗರು ತಮ್ಮ ಮದುವೆಗೆ ಕೋಲಕಾರನ ಮೂಲಕ ಎಲ್ಲಾ ಗಡಿಯ ಗೌಡರುಗಳು, ನಾಡಗೌಡ, ಕುಲದ ಗೌಡರಗಳನ್ನು ಕರೆಸುತ್ತಾರೆ. ಕೋಲಕಾರನ ಸಹಿತ ಎಲ್ಲ ಪಂಚಮರೂ ಇರುಳಿಗರ ಮದುವೆ ಸಮಾರಂಭದಲ್ಲಿ ಹಾಜರಿರಲೇಬೇಕು. ಒಂದು ವೇಳೆ ಒಬ್ಬನಿಗೆ ಕಾರಣಾಂತರದಿಂದ ಬರಲು ಸಾಧ್ಯವಾಗದಿದ್ದರೆ ಆತನ ಪ್ರತಿನಿಧಿಯನ್ನಾಗಿ ಯಾರನ್ನಾದರು ನಿಯೋಜಿಸಬೇಕಾಗುತ್ತದೆ. ಹಾಗೆ ಬಂದ ಪಂಚಮರೆದುರು ಕೋಲಕಾರ ತನ್ನಲ್ಲಿರುವ ಅಂದರೆ ಕುಲದವರು ಕೊಟ್ಟಿರುವ ಕರಿ ಕುಂಬಳಿಯ ಗದ್ದುಗೆಯನ್ನು ಹಾಕುತ್ತಾನೆ. ಕರಿ ಕಂಬಳಿಯ ಮಧ್ಯದಲ್ಲಿ ಒಂದರಲ್ಲಿ ಒಂದರಂತೆ ಮೂರು ವೃತ್ತಗಳನ್ನು ರಂಗೋಲಿ ಅಥವಾ ವಿಭೂತಿಯ ಪುಡಿಯಿಂದ ಬರೆಯುತ್ತಾರೆ. ಅದರ ಮಧ್ಯಕ್ಕೆ ಅರಿಶಿನ ಕುಂಕುಮ ಇಡುತ್ತಾರೆ. ಹಾಗೆಯೇ ನಾಲ್ಕು ಮೂಲೆಗಳಲ್ಲೂ ವೃತ್ತಗಳನ್ನು ಬರೆದು ಮೊದಲು ಅಲ್ಲಿ ಎಲೆ ಅಡಿಕೆಗಳನ್ನು ಇಟ್ಟು ನಂತರ ಎಲ್ಲ ಕಡೆಗೂ ವೀಳ್ಯಗಳನ್ನು ಇರಿಸಿದ ನಂತರ ಪೂಜೆ ಮಾಡುತ್ತಾನೆ. ಗದ್ದಿಗೆಯ ಪೂಜೆ, ಧಾರಾ ಮೂಹರ್ತ ಮತ್ತು ತಾಳಿ ಕಟ್ಟುವುದು ಮುಗಿದ ಮೇಲೆ ಹಸೆ ಮಣೆಯ ಮೇಲೆ ಹೆಣ್ಣು ಗಂಡುಗಳನ್ನು ಕೂರಿಸುತ್ತಾರೆ ಮದುವೆ ಮಹೂರ್ತಕ್ಕೆ ಆಗಮಿಸಿರುವ ಕುಲದ ಪಂಚಮರ ಸಮ್ಮುಖದಲ್ಲಿ ನಡೆಯುವ ಇರುಳಿಗರ ಬಹುಮುಖ್ಯ ಆಚರಣೆ ವೀಳ್ಯಶಾಸ್ತ್ರ. ಕೋಲುಕಾರ ಮೂರು ಎಲೆ ಮೂರು ಅಡಿಕೆಯಂತೆ ಇಪ್ಪತ್ತೈದು ಅಥವ ಐವತ್ತೊಂದು ಅಥವಾ ನೂರೊಂದುರವರೆಗೂ ವೀಳ್ಯ ಜೋಡಿಸುತ್ತಾರೆ. ವೀಳ್ಯ ಜೋಡಿಸಿದ ಬಳಿಕ ಕೋಲಕಾರ ಪೂಜೆ ಮಾಡಿ ಅಡ್ಡ ಬಿದ್ದು ನಮಸ್ಕರಿಸುತ್ತಾನೆ.

**ಊಟದ ವ್ಯವಸ್ಥೆ**

ಧಾರಾಮಹೂರ್ತ ಮುಗಿಯುತ್ತಿದ್ದಂತೆ ಬಂದವರೆಲ್ಲ ಊಟದ ಮನೆಯ ಕಡೆಗೆ ಹೊಗುತ್ತಾರೆ. ಊಟದ ಮನೆಯ ಹೊರಗೇ ಚಪ್ಪಲಿಗಳನ್ನು ಬಿಟ್ಟು ಹೊಸ್ತಿಲಿಗೆ ನಮಸ್ಕರಿಸಿ ಪ್ರವೇಶಿಸಬೇಕು ಅಡಿಗೆ ಮನೆ ಜವಾಬ್ದಾರಿ ಹಾಗೂ ಉಸ್ತುವಾರಿ ಕೋಲಕಾರನದು. ಊಟದ ರಾಶಿಗೆ ಪೂಜೆ ಮಾಡಿದ ನಂತರ ಪಂಕ್ತಿಗೆ ಊಟ ಬಡಿಸುತ್ತಾರೆ. ಇಡೀ ಪಂಕ್ತಿಗೆ ಧೂಪದ ಹೊಗೆ ತೋರಿಸಿ ಅಡ್ಡಬಿದ್ದು ಊಟ ಮಾಡಲು ಅನುಮತಿಸಿದ ಮೇಲೆ ಊಟ ಮಾಡಬೇಕು. ಹಾಗೆ ಅನುಮತಿಸುವ ಮೊದಲೇ ಊಟಕ್ಕೆ ಕೈ ಹಾಕಿದರೆ ಅದು ಶಿಕ್ಷಾರ್ಹ ಅಪರಾಧ. ಊಟದ ನಂತರ ಮೇಲೇಳಲೂ ಕೂಡ ಕೋಲಕಾರನ ಅನುಮತಿ ಬೇಕಾಗುತ್ತದೆ.

**ದೇವರು ಬಿಡುವುದು**

ವಿವಾಹಕ್ಕೆ ಬಂದ ಬಂಧು–ಭಾಂಧವರೆಲ್ಲ ಊಟ ಮುಗಿದ ಮೇಲೆ ಐದು ಜನ ಮುತ್ತೈದೆಯರು ತಟ್ಟೆಗಳನ್ನು ಹಿಡಿದು ಮಣ್ಣಿನ ಕರಗವನ್ನು ಹೆಣ್ಣಿನ ತಲೆಯ ಮೇಲೆ ಹೊರಿಸಿ ನೀರಿರುವ ಬಾವಿ ಅಥವ ಕೆರೆ ಅಥವಾ ನದಿಗೆ ಹೋಗಿ ಗಂಗಾಪೂಜೆ ಮಾಡಿ ದೇವರು ಬಿಟ್ಟು ಅಂದರೆ ಕುಡಿಕೆಯಲ್ಲಿನ ವಸ್ತುಗಳನ್ನು

(ಎಲೆ ಅಡಿಕೆ, ಹೂ, ಅಕ್ಕಿ, ಹೊಂಬಾಳೆ ಇತ್ಯಾದಿ) ನೀರಿಗೆ ಚೆಲ್ಲಿ ಮತ್ತೆ ಆ ಕರಗಕ್ಕೆ ನೀರು ತುಂಬಿಸಿಕೊಂಡು ತರುತ್ತಾರೆ.

**ಬೀಗರೂಟ**

ಮದುವೆ ಮುಗಿದ ಮೂರನೇ ದಿನ ಬೀಗರೂಟ. ಮದುವೆ ಮಾಡಿದವರು ಗಂಡಿನವರಾದರೆ ಹೆಣ್ಣಿನ ಮನೆಯವರು ಬೀಗರೂಟ ಹಾಕಿಸಬೇಕು. ಹೆಣ್ಣಿನ ಮನೆಯವರು ಮದುವೆ ಮಾಡಿದರೆ ಗಂಡಿನ ಮನೆಯವರು ಬೀಗರೂಟ ಹಾಕಬೇಕು. ಬಂದಿರುವ ಬೀಗರು, ನೆಂಟರಿಷ್ಟರಿಗೆಲ್ಲ ಕುರಿ–ಮೇಕೆ ಇಲ್ಲವೆ ಕೋಳಿ ಕಡಿದು ಮಾಂಸದಡಿಗೆ ಮಾಡಿ ಬಡಿಸುತ್ತಾರೆ. ಮದುವೆಗೆ ಮುಂಚೆ ಹೆಣ್ಣು ಋತುಮತಿಯಾಗಿದ್ದರೆ ಮದುವೆಯ ದಿನ ಅಥವಾ ಮಾರನೇ ದಿನವೇ ಪ್ರಸ್ತ ಕಾರ್ಯವನ್ನು ಮಾಡುತ್ತಾರೆ ಅಥವ ಗೊತ್ತುಪಡಿಸಿದ ದಿನ ಗಂಡಿನ ಸಹಿತ ಒಸಗೆ ಸಾಮಾನುಗಳನ್ನು ತೆಗೆದುಕೊಂಡು ಹಣ್ಣಿನ ಮನೆಗೆ ಬರುತ್ತಾರೆ. ತಂದ ವಸ್ತುಗಳನ್ನು ತಟ್ಟೆಗಳಲ್ಲಿ ತುಂಬಿ ಹೆಣ್ಣು ಗಂಡುಗಳ ಮುಂದೆ ಇಟ್ಟ ಮೇಲೆ ಎಲ್ಲರಿಗೂ ಮಾಂಸದೂಟದ ವ್ಯವಸ್ಥೆಯಾಗಿರುತ್ತದೆ. ಕೆಲವೆಡೆ ಒಸಗೆ ಹಾಕುವ ಶಾಸ್ತ್ರಕ್ಕೆ ಬದಲಾಗಿ ಗಂಡು ತಂದಿರುವ ಹಣ್ಣು ಕಾಯಿಗಳನ್ನು ಹೊಸ್ತಿಲ ಒಳಗೆ ನಿಂತ ಹೆಣ್ಣು ತನ್ನ ಮಡಿಲೊಡ್ಡಿ ಹಾಕಿಸಿಕೊಳ್ಳುತ್ತಾಳೆ. ಹುಡುಗಿ ಗಂಡನ ಕಾಲಿಗೆ ಪೂಜೆ ಮಾಡಿ ನಮಸ್ಕರಿಸಿ ಪಾದದ ಮೇಲಿನ ಕುಂಕುಮವನ್ನು ಹಣೆಗೆ ಹಚ್ಚಿಕೊಳ್ಳುತ್ತಾಳೆ.

ಗಂಡಿನ ಅಕ್ಕ ಅಥವಾ ತಂಗಿ ಪ್ರಸ್ತದ ಕೊಠಡಿಗೆ ಒಳಹೋಗುವ ಸಹೋದರನನ್ನು ತಡೆಯುತ್ತಾಳೆ. ಆತ ಏನೇನೋ ಕೊಡುತ್ತೇನೆಂದು ಹೇಳಿದರೂ ಆಕೆ ಅದಕ್ಕೆ ಒಪ್ಪದೆ ನಿನಗೆ ಹುಟ್ಟುವ ಮಗ ಅಥವಾ ಮಗಳು ನನ್ನ ಮನೆಯ ಅಳಿಯ ಅಥವಾ ಸೊಸೆಯಾಗಲು ಒಪ್ಪಿದರೆ ಮಾತ್ರ ಬಿಡುತ್ತೇನೆಂದು ಪಟ್ಟು ಹಿಡಿಯುತ್ತಾಳೆ. ಆತ ಹಾಗೇ ಆಗಲಿ ಎಂದು ಒಪ್ಪಿಗೆ ಕೊಟ್ಟ ಮೇಲೆ ಅವನನ್ನು ಒಳಗೆ ಬಿಡುತ್ತಾಳೆ. ಅಲ್ಲಿಗೆ ಇರುಳಿಗರ ಪ್ರಸ್ತದ ಶಾಸ್ತ್ರ ಮುಗಿಯುತ್ತದೆ.

**ಕೂಡಿಕೆ ಅಥವಾ ವಿಧವಾ ವಿವಾಹ**

ಇರುಳಿಗರ ವೈವಾಹಿಕ ಸಂಪ್ರದಾಯಗಳು ಬಹುಮಟ್ಟಿಗೆ ವೈದಿಕ, ಹಿಂದೂ, ಅಗ್ನಿಸಾಕ್ಷಿ ವೇದೋಕ್ತಗಳಿಂದ ಸಂಪೂರ್ಣವಾಗಿ ಮುಕ್ತವಾಗಿವೆ. ವಿಧವಾ ವಿವಾಹ ಇಂದಿಗೂ ಕೂಡ ಕಂಡುಬರುತ್ತವೆ. ಇರುಳಿಗರಲ್ಲಿ ಕೂಡಿಕೆ ಪದ್ಧತಿ ರೂಢಿಯಲ್ಲಿದೆ. ಪ್ರಾಯ ಮುಗಿಯುವ ಮುನ್ನ ಗಂಡ ಸತ್ತ ಹೆಣ್ಣು ಅಥವಾ ಹೆಂಡತಿ ಸತ್ತ ಗಂಡ ಮರು ಮದುವೆಯಾಗಬಹುದಾದ ಸಂಪ್ರದಾಯವನ್ನು ಉಳಿಸಿಕೊಂಡು ಬಂದಿದ್ದಾರೆ. ಈ ಮರು ಮದುವೆಯನ್ನು ಇವರು "ಕೊಟ್ಗೆ" ಅಥವಾ "ಕೂಡಿಕೆ" ಎನ್ನುತ್ತಾರೆ. ಈ ಬಗ್ಗೆ ಎಲ್.ಕೆ ಅನಂತಕೃಷ್ಣ ಅಯ್ಯರ್ ಹೀಗೆ ಹೇಳಿದ್ದಾರೆ. "*Widows are allowed to remarry under KUDIKE from any number of times, and the ceremonies connected therewith are confined to a single day. A bachelor is allowed to marry a widow, but her deceased husband's brothers are prohibited from marrying her. Except the prohibition that the remarried widow should not handle a KALASA in the regular marriage ceremonies, no disabilities are attached to her or her issue by*

*her remarriage*". ಕೂಡಿಕೆ ಅಥವಾ ಮರುವಿವಾಹದ ಸಾಮಾನ್ಯ ವೆಚ್ಚಗಳನ್ನು ಗಂಡಿನ ಕಡೆಯವರೇ ಭರಿಸುತ್ತಾರೆ. ಕೆಲವೊಮ್ಮೆ ಇವರ ಕೂಡಿಕೆ ಅಥವ ಮರುವಿವಾಹ ಅಥವ ವಿಧವಾ ವಿವಾಹ; ಮೊದಲ ಮದುವೆಗಿಂತ ಹೆಚ್ಚು ದುಬಾರಿಯಾಗಿರುತ್ತದೆ. ಇಲ್ಲಿ ತಾಳಿ ಕಟ್ಟುವುದು ಧಾರಾಮುಹೂರ್ತ ಯಾವುದೂ ಇರುವುದಿಲ್ಲ. ಮೊದಲ ಗಂಡನಿಂದ ಮಕ್ಕಳಾಗಿದ್ದರೆ ಅವುಗಳ ಲಾಲನೆ ಪಾಲನೆ ಪುರುಷನದೆ ಆಗಿರುತ್ತದೆ. ಮಕ್ಕಳು ಇಷ್ಟಪಟ್ಟರೆ ತಾಯಿಯ ಬಳಿಗೆ ಹೋಗಬಹುದು ಕೂಡಿಕೆ ಇವರಲ್ಲಿ ಸಾಮಾನ್ಯವಾದ್ದರಿಂದ ಯಾವುದೇ ಕೆಟ್ಟ ಭಾವನೆಗಳಿಗೂ ಅವಕಾಶವಿರುವುದಿಲ್ಲ.

**ಉಪಸಂಹಾರ**

ಇರುಳಿಗರು ಬದಲಾದ ಸಾಮಾಜಿಕ ಸಂದರ್ಭದಲ್ಲಿ ಪರಿವರ್ತನೆಯ ಹಾದಿಯಲ್ಲಿದ್ದಾರೆ. ಶಿಕ್ಷಣ, ಮತದಾನದ ಹಕ್ಕುಗಳು ಅವರನ್ನು ಬದಲಾಣೆಯತ್ತ ಕೊಂಡೊಯ್ಯುತ್ತಿದೆ. ಅವರ ಆಚರಣೆಗಳು ಸತ್ವ ಕಳೆದುಕೊಳ್ಳುತ್ತಿವೆ. ಶಿಷ್ಟ ಸಂಸ್ಕೃತಿಯ ಪ್ರಭಾವ ಗಾಢವಾಗುತ್ತಿದ್ದು, ಆಚರಣೆಗಳಲ್ಲಿನ ಆದಿಮ ಸಂಸ್ಕೃತಿಯ ಪಳೆಯುಳಿಕೆಗಳು ಕಳೆಗುಂದುತ್ತಿವೆ. ಅವರ ಸಾಮಾಜಿಕ ವ್ಯವಸ್ಥೆಯಲ್ಲಿನ ಭದ್ರತೆ ಕೂಡ ಅಭದ್ರವಾಗುತ್ತಿದೆ. ಕುಲಪಂಚಾಯ್ತಿಯ ಕಟ್ಟು ಕಟ್ಟಳೆಗಳು ನಶಿಸುತ್ತಿವೆ. ಮೊದಲಿನ ಮದುವೆ ಪದ್ಧತಿಗಳು ಮಾಯವಾಗಿ ಗ್ರಾಮೀಣರ ಗಾಢ ಪ್ರಭಾವದಿಂದಾಗಿ ಸೋಬಾನೆ ಪದಗಳ ಸ್ಥಾನವನ್ನು ಡೋಲು, ನಾಗಸ್ವರಗಳು ಆಕ್ರಮಿಸುತ್ತಿವೆ. ಮರ ಸುತ್ತಿ ಆಗುತ್ತಿದ್ದ ಮದುವೆಗಳು ಸಂಪೂರ್ಣವಾಗಿ ನಿಂತೆ ಹೋಗಿದೆ. ವಧುದಕ್ಷಿಣೆಯ ಸ್ಥಾನವನ್ನು ವರದಕ್ಷಿಣೆ ಆವರಿಸುತ್ತಿದೆ.

**ಪರಾಮರ್ಶನ ಗ್ರಂಥಗಳು**


- Anantha Krishna Iyer L.K "The Mysore Tribes And Castes " Vol-3 Mysore The Mysore University
- Kambala. B Siddagangaiah (1993). Illigara Samsknathi, Karnataka Sahitya Academy, Bangalore.
- Kuruva Basavaraju (2000) Irularu in H.J.Lakkappagowda (edited) Karnataka Budu Kattugalu Vol-1, Karnataka Janapada and Yakshgana Academy, Bangalore.
- Manjunatha B R, Annapurna M. and Shylaja K. (2014). Socio-Economic Life of Iruliga Tribe in Karnataka, Anteroom Online Journal of Anthropology, Vol. 10. No-1.
- Sigh. K.S 1994, The Scheduled Tribes People of India, National Series Vol-III, AsI Oup, Delhi